ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,

ದಕ್ಷಿಣ ಕನ್ನಡ, ಮಂಗಳೂರು

**ಸ್ಪೆಷಲ್ ಕೇಸ್ ನಂಬ್ರ 11/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಜಗನ್ನಾಥ ಕೆ. | ಚಾಸಾಃ : 36 |
| ತಂದೆಯ ಹೆಸರು | : | ದಿಃ ತೋಮ | ಫ್ರಾಸಾಃ 15 |
| ಫ್ರಾಯ | : | 61 ವರ್ಷ | ದಿನಾಂಕಃ 29.01.2026 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ನಿವೃತ್ತ ಪಿ.ಎಸ್.ಐ. | |
| ವಾಸಸ್ಥಳ | : | ತಲಪಾಡಿ, ಮಂಗಳೂರು | |

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ನಾನು 2020 ರಿಂದ 2022 ವರೆಗೆ ಮಂಗಳೂರು ಪೂರ್ವ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ. 10.06.2021 ರಂದು ಸಂಜೆ 7.30 ಗಂಟೆಗೆ ಫ್ರಾಸಾ–9 ರವರು ಠಾಣೆಗೆ ಬಂದು ನೀಡಿದ ನಿಪಿ–22 ದೂರನ್ನು, ನ್ಯಾಯಾಲಯದ ವಿ.ಸಿ. ಯಲ್ಲಿ ಕಾಣಿಸುವ ಆರೋಪಿತನನ್ನು, ಸ್ವತ್ತು ಮತ್ತು ದಾಖಲೆಗಳನ್ನು ಠಾಣೆಗೆ ಹಾಜರುಪಡಿಸಿದ್ದು ಅವುಗಳ ಆಧಾರದ ಮೇಲೆ ಠಾಣಾ ಮೊಕದ್ದಮೆ ನಂ.81/2021 ರಂತೆ ಕಲಂ 8(c), 21(c) of NDPS Act ಪ್ರಕರಣ ದಾಖಲಿಸಿ ಚಾಸಾ–30 ರವರ ಮುಖಾಂತರ ಪ್ರ.ವ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಪ್ರ.ವ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ–41 ಎಂದು, ಸಾಕ್ಷಿಯ ಸಹಿಯನ್ನು ನಿಪಿ 41(ಎ) ಎಂದು ಗುರುತಿಸಲಾಯಿತು. ನಿಪಿ 22 ರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–22(ಬಿ) ಎಂದು ಗುರುತಿಸಲಾಯಿತು.

3. ಹಾಜರುಪಡಿಸಿದ ಸ್ವತ್ತನ್ನು ಮಾಲು ಪಟ್ಟಿ ಸಂ. 65/21 ರಲ್ಲಿ ನ್ಯಾಯಾಲಯಕ್ಕೆ

ನಿವೇದಿಸಿಕೊಂಡಿರುತ್ತೇನೆ. ಸದರಿ ಮಾಲು ಪಟ್ಟಿಯನ್ನು ನೋಡುತ್ತಿದ್ದು ಅದನ್ನು ನಿಪಿ–42 ಎಂದು, ಸಾಕ್ಷಿಯ ಸಹಿಯನ್ನು ನಿಪಿ 42(ಎ) ಎಂದು ಗುರುತಿಸಲಾಯಿತು. ನಂತರ ಆರೋಪಿ ಮತ್ತು ಕಡತವನ್ನು ಚಾಸಾ–38 ರವರಿಗೆ ಮುಂದಿನ ತನಿಖೆಗಾಗಿ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎಂ.ಬಿ. ವಕೀಲರ ಪರವಾಗಿ ಶ್ರೀ ವಿ.ಆರ್.ಎ. ವಕೀಲರಿಂದಃ**

4. ಕಡತ ಮತ್ತು ಸ್ವತ್ತುಗಳನ್ನು ಮುಂದಿನ ತನಿಖೆಗಾಗಿ ಚಾಸಾ–38 ರವರಿಗೆ ವಹಿಸಿಕೊಟ್ಟಿರುತ್ತೇನೆ. ನನ್ನ ವಶಕ್ಕೆ ಸ್ವತ್ತುಗಳನ್ನು ಕೊಟ್ಟ ನಂತರ ಚಾಸಾ–38 ರವರಿಗೆ ಕೊಡುವವರೆಗೆ ಅವುಗಳು ಠಾಣೆಯಲ್ಲೆ ಇದ್ದವು. ಸಾಕ್ಷಿ ಸ್ವತಃ ಅದೇ ದಿನ ನಾನು ಸ್ವತ್ತುಗಳನ್ನು ಚಾಸಾ–38 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಹೇಳುತ್ತಾರೆ.

**ಮರುವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.